'ಶೈಲಜಾಗೆ ಅಳವಡಿಸಲಾದ ಒಂದು ಫ್ಲೋ ಡೈವರ್ಟರ್ ಸ್ಟಂಟ್‌ಗೆ ಅಂದಾಜು ಎಂಟು ಲಕ್ಷ ರೂಪಾಯಿಗಳು. ಎರಡು ಸ್ಟಂಟ್‌ಗಳಿಗೆ ಸುಮಾರು 16 ಲಕ್ಷ ರೂಪಾಯಿ ವೆಚ್ಚದ್ದಾಗಿತ್ತು. ಅಷ್ಟೊಂದು ಹಣ ಹೊಂದಿಸುವುದು ಕಷ್ಟ ಎಂದು ವಾಪಸ್ ಮನೆಗೆ ಹೋಗಲಿದ್ದ ಶೈಲಜಾಗೆ ಜರ್ಮನಿಯ ವೈದ್ಯಕೀಯ ತಜ್ಞರೊಬ್ಬರು ಸ್ಟಂಟ್‌ಗಳನ್ನು ಉಚಿತವಾಗಿ ನೀಡಿದ್ದರಿಂದ ಶಸ್ತ್ರಚಿಕಿತ್ಸೆ ಮೂಲಕ ಇದನ್ನು ಅಳವಡಿಸಲಾಗಿತ್ತು. ಇದೀಗ ಶೈಲಜಾ ಸಂಪೂರ್ಣ ಚೇತರಿಸಿಕೊಂಡಿದ್ದು ದೈನಂದಿನ ಕೆಲಸ ಮಾಡಿಕೊಳ್ಳುವಷ್ಟು ಶಕ್ತರಾಗಿದ್ದಾರೆ' ಎಂದೂ ಹೇಳುತ್ತಾರೆ ಡಾ. ಶರತ್.

### ಸಮಸ್ಯೆಗಳ ಸರಮಾಲೆ

'ಮೆದುಳಿನ ಅನ್ಯುರಿಸಂ ಪ್ರಕರಣದಲ್ಲಿ ರೋಗಿಗೆ ಸಾಮಾನ್ಯವಾಗಿ ಯಾವುದೇ ಬಲವಾದ ಸೂಚನೆಗಳು ಕಾಣಿಸುವುದಿಲ್ಲ. ಕೇವಲ ಸ್ಕ್ಯಾನಿಂಗ್ ಮತ್ತು ಆಮೂಲಾಗ್ರ ತಪಾಸಣೆ ಮಾಡಿದಾಗಲೇ ಈ ಸಮಸ್ಯೆ ಬೆಳಕಿಗೆ ಬರುವುದು. ಬಹುತೇಕ ಪ್ರಕರಣಗಳಲ್ಲಿ ಮೆದುಳಿನ ಅನ್ಯುರಿಸಂ ಸಮಸ್ಯೆಯು, ಮೆದುಳಿಗೆ ರಕ್ತ ಪೂರೈಸುವ ನಾಳಗಳಲ್ಲಿ ಕಂಡುಬರುತ್ತಿದ್ದು, ಚಿಕಿತ್ಸೆ ಪಡೆಯುವುದು ಸ್ವಲ್ಪ ತಡವಾದರೂ ಗಂಭೀರ ಸ್ವರೂಪದ ಪಾರ್ಶ್ವವಾಯು ತಗುಲಲಿದೆ. ಇಂಥ ಕೆಲವು ಸಂದರ್ಭಗಳಲ್ಲಿ ರೋಗಿಯು ತೀವ್ರತರನಾದ ತಲೆನೋವು, ದೃಷ್ಟಿ ಮಂದ, ಮಾತು ಬದಲಾಗುವುದು, ಕತ್ತುನೋವು ಮುಂತಾದ ಸಮಸ್ಯೆಗಳನ್ನೂ ಎದುರಿಸಬೇಕಾಗುತ್ತದೆ' ಎಂದು ವಿವರಿಸುತ್ತಾರೆ ಅಪೋಲೊ ಆಸ್ಪತ್ರೆಯ ಮತ್ತೊಬ್ಬ ಹಿರಿಯ ನರರೋಗ ತಜ್ಞ ಡಾ. ಅಗಡಿ ವಾಸ್.

'ಈ ತೊಂದರೆ ಉಂಟಾದ ಅಂದಾಜು 100 ಜನರಲ್ಲಿ 90 ಮಂದಿಗೆ ತೀವ್ರತರವಾದ ಪಾರ್ಶ್ವವಾಯು ನಿಶ್ಚಿತ. ಇಂಥ ಪ್ರಕರಣ ಭಾರತದಲ್ಲಂತೂ ಬಹಳ ಅಪರೂಪ. ಇದಕ್ಕೆ ನೀಡುವ ಚಿಕಿತ್ಸೆಯೂ ಬಹಳ ಸವಾಲಿನದ್ದು. ಅಮೆರಿಕ, ಯೂರೋಪ್ ಮುಂತಾದ ಮುಂದುವರಿದ ರಾಷ್ಟ್ರಗಳಲ್ಲಿ ಈ ಚಿಕಿತ್ಸೆ ಸುಲಭದಲ್ಲಿ ಲಭ್ಯ. ಆದರೆ ಭಾರತದಲ್ಲಿ ಕೆಲವೇ ಕೆಲವು ಆಸ್ಪತ್ರೆಗಳಲ್ಲಿ ಈ ಸೌಲಭ್ಯ ಇದೆ. ತಜ್ಞ ವೈದ್ಯರ ಸಂಖ್ಯೆಯೂ ಬಹಳ ಕಡಿಮೆ. ಇಡೀ ಭಾರತದಲ್ಲಿ ಈ ಶಸ್ತ್ರಚಿಕಿತ್ಸೆ ಮಾಡುವ 25 ತಜ್ಞ ವೈದ್ಯರಿದ್ದರೆ ನಮ್ಮ ಕರ್ನಾಟಕದಲ್ಲಿ ಕೇವಲ ನಾಲ್ಕು ಮಂದಿ ನುರಿತ ವೈದ್ಯರಿದ್ದಾರೆ. ಅಲ್ಲದೆ 2010ಕ್ಕೂ ಮುನ್ನ ಬ್ರೈನ್ ಅನ್ಯುರಿಸಂ ಗೆ ಚಿಕಿತ್ಸೆಯೇ ಇರಲಿಲ್ಲ. ಈಗ ವೈದ್ಯ ವಿಜ್ಞಾನ–ತಂತ್ರಜ್ಞಾನ ಬಹಳಷ್ಟು ಮುಂದುವರಿದಿರುವುದರಿಂದ ಚಿಕಿತ್ಸೆ ಲಭ್ಯ' ಎನ್ನುತ್ತಾರೆ ಡಾ. ಅಗಡಿ.

### 'ಮರುಜೀವ ಪಡೆದೆ'

'ಮಧುಮೇಹ ಹಾಗೂ ಥೈರಾಯ್ಡ್ ಸಮಸ್ಯೆಗಳಿಂದ ಬಳಲುತ್ತಿದ್ದ ನನಗೆ ಒಂದು ದಿನ ಇದ್ದಕ್ಕಿದ್ದ ಹಾಗೆ ಬಾಯಿ ಕ್ರಾಸ್ ಆದ ಹಾಗಾಯಿತು. ಮಾತೇ ಹೊರಡಲಿಲ್ಲ. ತಕ್ಷಣ ಡಾ. ಅಗಡಿ ಅವರ ಬಳಿ ಹೋದೆ. ಅವರು ತಪಾಸಣೆ ನಡೆಸಿ ಅಪೋಲೊಗೆ ಬರುವಂತೆ ಹೇಳಿದರು. ಅಲ್ಲಿ ಅನಸ್ತೇಷಿಯಾ ನೀಡಿ ನನಗೆ ಶಸ್ತ್ರಚಿಕಿತ್ಸೆ ಮಾಡಲಾಯಿತು. ಈಗ ಸಂಪೂರ್ಣ ಆರೋಗ್ಯವಾಗಿದ್ದು ನನಗೆ ಮರುಜೀವ ಬಂದಂತಾಗಿದೆ' ಎಂದು ಹೇಳುತ್ತಾರೆ ಶೈಲಜಾ.

'ತಾಯಿಯ ಆರೋಗ್ಯದಲ್ಲಿ ವ್ಯತ್ಯಾಸ ಕಂಡುಬರುತ್ತಲೇ ವೈದ್ಯರನ್ನು ಭೇಟಿಯಾದೆವು. ಅಪೋಲೊ ಆಸ್ಪತ್ರೆಯ ವೈದ್ಯರು ಇವರಿಗೆ ಬ್ರೈನ್ ಅನ್ಯುರಿಸಂ ಇದೆ ಎಂದರು. ಎಂಆರ್‌ಐ ಸ್ಕ್ಯಾನ್ ಮಾಡಿಸಿದಾಗ ಇವರಿಗೆ ಎಂಡೋವ್ಯಾಸ್ಕುಲರ್ ನ್ಯೂರೊ ಇಂಟರ್‌ವೆನ್ಷನ್ ಮಾಡಲೇ ಬೇಕು ಎಂಬ ತೀರ್ಮಾನಕ್ಕೆ ವೈದ್ಯರು ಬಂದರು. ಇದಕ್ಕೆ ಎರಡು ಸ್ಟಂಟ್‌ಗಳ ಅಗತ್ಯವಿದ್ದು ಬೆಲೆ ಸುಮಾರು 16 ಲಕ್ಷ ರೂಪಾಯಿ ಎಂದಾಗ ನಮಗೆ ದಿಕ್ಕೇ ತೋಚದಾಯಿತು. ನಾವು ವಾಪಸಾಗುವ ಹಂತ ತಲುಪಿದಾಗ ಜರ್ಮನಿಯ ರೇಡಿಯಾಲಜಿಸ್ಟ್ ಸ್ಟಂಟ್ ಅನ್ನು ದೇಣಿಗೆ ನೀಡುವುದಾಗಿ ಹೇಳಿದರು. ಅವರ ಉದಾರ ಕಾಣಿಕೆಯಿಂದ ಶಸ್ತ್ರಚಿಕಿತ್ಸೆ ಸುಗಮವಾಗಿ ನೆರವೇರಿತು. ದೇಣಿಗೆ ನೀಡಿದ ವೈದ್ಯರು ಹಾಗೂ ಶಸ್ತ್ರಚಿಕಿತ್ಸೆ ನಡೆಸಿದ ಅಪೋಲೊ ಆಸ್ಪತ್ರೆಯ ತಂಡಕ್ಕೆ ನಾವು ಆಭಾರಿಯಾಗಿದ್ದೇವೆ' ಎಂದು ಹೇಳುತ್ತಾರೆ ಶೈಲಜಾ ಅವರ ಪುತ್ರ ಚಂದನ್.

**ಮಾಹಿತಿಗೆ: 080–4668 8888**

## ಬಾಧಿಸುವ ನರರೋಗ

ಇದೊಂದು ನರವ್ಯೂಹಕ್ಕೆ ಸಂಬಂಧಿಸಿದ ಕಾಯಿಲೆ. ಮಧುಮೇಹ, ರಕ್ತದೊತ್ತಡದಂತಹ ಜೀವನಶೈಲಿ ಕಾಯಿಲೆಗಳಂತೆ ಇದು ಮಾನಸಿಕ ತೊಂದರೆ ನೀಡುವ ರೋಗ. 'ಮಲ್ಟಿಪಲ್ ಸ್ಕ್ಲೆರೋಸಿಸ್' (ಎಂಎಸ್) ಹೆಸರಿನಿಂದ ಕರೆಯುವ ಈ ಕಾಯಿಲೆ ನಗರ ಪ್ರದೇಶಗಳಲ್ಲಿ ಜನರಿಗೆ ಈಗೀಗ ಹೆಚ್ಚಾಗಿ ಬಾಧಿಸುತ್ತಿದೆ. ಅದರಲ್ಲೂ 15ರಿಂದ 45 ವರ್ಷದವರಲ್ಲಿ ಈ ರೋಗ ಕಾಣಿಸಿಕೊಳ್ಳುವುದು ಹೆಚ್ಚು. ಮಹಿಳೆಯರಲ್ಲಿ ಇನ್ನೂ ಹೆಚ್ಚು. ಇದಕ್ಕೆ ಒತ್ತಡವೇ ಪ್ರಮುಖ ಕಾರಣ ಎಂದು ಹೇಳಲಾಗಿದೆ. ಮೆದುಳಿನಲ್ಲಿರುವ ನರವ್ಯೂಹದಲ್ಲಿ ಪ್ರತಿರೋಧ ಶಕ್ತಿ ಕಡಿಮೆ ಆಗುವುದರಿಂದ ಈ ರೋಗ ಕಾಣಿಸಿಕೊಳ್ಳುತ್ತದೆ.

'ಎಂಎಸ್ ಎಂಬುದು ದೀರ್ಘಕಾಲಿಕ ಕೇಂದ್ರ ನರಮಂಡಲದ (ಸಿಎನ್‌ಎಸ್) ಕಾಯಿಲೆ. ಇದು ಮೆದುಳು, ಬೆನ್ನೆಲುಬು, ಮತ್ತು ಕಣ್ಣಿನ ನರಗಳನ್ನು ಬಾಧಿಸುತ್ತದೆ. ಹೊಸ ಲಕ್ಷಣಗಳಿಲ್ಲದಿದ್ದರೂ ಕಾಯಿಲೆಯು ನಿರಂತರವಾಗಿ ಬಾಧಿಸುತ್ತದೆ. ಇದರಿಂದ ದೃಷ್ಟಿ ಮಂದವಾಗುವಿಕೆ, ದೃಷ್ಟಿ ಮಂದ, ಕೈಕಾಲು ಜೋಮು ಹಿಡಿದ ಹಾಗೆ ಆಗುವುದು, ಯಾವುದೇ ಭಾಗ ಮರಗಟ್ಟುವಿಕೆ, ನಡೆಯುವಾಗ ದೇಹದ ಅಸಮತೋಲನ ಮತ್ತು ಕಾಯಿಲೆಯು ಹೆಚ್ಚಿದಂತೆ, ಬ್ಲಾಡರ್ ಕಾರ್ಯಸ್ಥಗಿತಗೊಳ್ಳಬಹುದು, ಮುಖದಲ್ಲಿ ಅಲ್ಲಲ್ಲಿ ನೋವು ಬರುವುದು, ಎದುರಿನ ವ್ಯಕ್ತಿಯನ್ನು ಗುರುತಿಸಲು ಕಷ್ಟವಾಗುವುದು ಮತ್ತು ನಡೆದಾಡಲು ತೊಂದರೆಯಾಗಬಹುದು' ಎಂದು ವಿವರ ನೀಡುತ್ತಾರೆ ಬೆಂಗಳೂರಿನ ವಿಕ್ರಂ ಆಸ್ಪತ್ರೆಯ ನರರೋಗ ತಜ್ಞ ಡಾ. ರಾಜೇಶ್ ಬಿ. ಅಯ್ಯರ್.

ಎಂಆರ್‌ಐ ಸ್ಕ್ಯಾನ್ ಮೂಲಕ ರೋಗ ಪತ್ತೆ ಸಾಧ್ಯ. ಇದನ್ನು ಮೆದುಳು ಮತ್ತು ಬೆನ್ನುಹುರಿಯ ಮೇಲೆ ಮಾಡಿಸಿದರೆ ರೋಗ ಪತ್ತೆ ಸಾಧ್ಯ. ಎಂಆರ್‌ಐ ಸ್ಕ್ಯಾನ್‌ನಲ್ಲಿ ಲಕ್ಷಣಗಳು ಕಂಡುಬಂದರೆ ರಕ್ತಪರೀಕ್ಷೆ ಮಾಡಿಸುವುದು ಅನಿವಾರ್ಯ. ಇದಕ್ಕೆ ಗುಳಿಗೆಗಳು, ಸ್ಟೀರಾಯ್ಡ್, ಇಂಜೆಕ್ಷನ್‌ಗಳನ್ನು ಹಂತ ಹಂತವಾಗಿ ನೀಡಿ ಚಿಕಿತ್ಸೆ ಮಾಡಲಾಗುತ್ತದೆ. ರೋಗ ಪತ್ತೆ ಬೇಗ ಆದಷ್ಟು ಗುಣವಾಗುವ ಪ್ರಮಾಣ ಬೇಗ ಆಗುತ್ತದೆ ಎನ್ನುವ ಡಾ.ರಾಜೇಶ್, ಇದರ ಚಿಕಿತ್ಸೆ ಬಹು ದುಬಾರಿ. ಮೆದುಳು, ಬೆನ್ನುಹುರಿಯ ಎಂಆರ್‌ಯ ಸ್ಕ್ಯಾನ್‌ಗೆ ಸುಮಾರು 12,500 ರೂಪಾಯಿ ತಗಲುತ್ತದೆ. ರೋಗಿಯ ರೋಗದ ತೀವ್ರತೆ ಅನುಗುಣವಾಗಿ 8 ಸಾವಿರ ರೂಪಾಯಿಗಳಿಂದ 80 ಸಾವಿರ ರೂಪಾಯಿಗಳವರೆಗೆ ಖರ್ಚು ಬರುತ್ತದೆ. ಅಲ್ಲದೆ ಈ ಔಷಧಿಗಳಿಂದ ಅಡ್ಡಪರಿಣಾಮ ಹೆಚ್ಚು ಎಂದು ಎಚ್ಚರಿಸುವ ಅವರು, ನಗರ ಪ್ರದೇಶಗಳಲ್ಲಿ ಕಲುಷಿತ ವಾತಾವರಣ, ಅಶುದ್ಧ ಗಾಳಿ, ಮಾನಸಿಕ ಒತ್ತಡ ಇವೇ ಮುಂತಾದ ಕಾರಣಗಳಿಂದ ರೋಗ ಶುರುವಾಗುತ್ತದೆ' ಎಂದು ಹೇಳುತ್ತಾರೆ.

'ಜೊತೆಗೆ ವಿಟಮಿನ್ ಡಿ ಕೊರತೆ, ದೈಹಿಕ ಶ್ರಮದ ಕೊರತೆಯೂ ಕಾರಣವಾಗಬಹುದು. ಹೀಗಾಗಿ ಹಳ್ಳಿಗಳಲ್ಲಿ ಈ ರೋಗ ಬಾಧೆ ಕಡಿಮೆ. ಬೆಂಗಳೂರಿನಲ್ಲಿ ಈಗ ಸುಮಾರು 1000 ರೋಗಿಗಳು ಈ ಕಾಯಿಲೆಯಿಂದ ಬಳಲುತ್ತಿದ್ದಾರೆ. ಕಳೆದ ಒಂದು ವರ್ಷದಿಂದ ಈಚೆಗೆ ಬೆಂಗಳೂರಿನಲ್ಲಿ ಎಂಎಸ್ ಪ್ರಕರಣಗಳು ಅತ್ಯಂತ ಹೆಚ್ಚು. ನಿಯಮಿತ ತಪಾಸಣೆಯ ವೇಳೆ, ವಿಕ್ರಮ್ ಆಸ್ಪತ್ರೆ ಒಂದರಲ್ಲೇ ಪ್ರತಿ 1000 ನರರೋಗ ಪ್ರಕರಣಗಳಲ್ಲಿ ಕನಿಷ್ಠ 20 ಎಂಎಸ್ ಪ್ರಕರಣಗಳನ್ನು ಕಂಡಿದ್ದೇವೆ. ದಿನೇ ದಿನೇ ಈ ಸಮಸ್ಯೆ ಹೆಚ್ಚುತ್ತಿರುವುದನ್ನು ಈ ಅಂಕಿ ಅಂಶಗಳು ಸಾಬೀತುಪಡಿಸುತ್ತಿವೆ' ಎಂದು ಹೇಳುತ್ತಾರೆ ಡಾ. ರಾಜೇಶ್.

'ಸಮಾಜದಲ್ಲಿ ಎಂಎಸ್ ಕುರಿತು ಜಾಗೃತಿ ಮೂಡಿಸಬೇಕಾಗಿದೆ. ಆರಂಭದ ಹಂತದಲ್ಲೇ ರೋಗ ನಿರ್ಣಯ ಮಾಡುವುದರಿಂದ ರೋಗಿ ಬೇಗನೆ ಗುಣವಾಗಲು ಸಾಧ್ಯವಾಗುತ್ತದೆ. ಎಂಎಸ್‌ಗೆ ಚಿಕಿತ್ಸೆ ನೀಡದೇ ಹೋದರೆ ಅಂಗವೈಕಲ್ಯ ಉಂಟಾಗಬಹುದು. ಈಗಾಗಲೇ ವಿಕಲಾಂಗ ಹೊಂದಿದ ಎಂಎಸ್ ರೋಗಿಗಳ ಜೀವನ ಮಟ್ಟ ಸುಧಾರಿಸುವುದು ಕೂಡಾ ಅವಶ್ಯಕವಾಗಿದೆ' ಎಂದು ಹೇಳುತ್ತಾರೆ ವಿಕ್ರಮ್ ಆಸ್ಪತ್ರೆಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ.ಸೋಮೇಶ್ ಮಿತ್ತಲ್.

■ ಯು.ಎ.